477

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 827 (913)
2. ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ.<br>(ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 22-02-2024
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸರ್ಕಾರವು ಗೃಹ ಲಕ್ಷ್ಮೀ, ಶಕ್ತಿ ಯೋಜನೆ, ಗೃಹ ಜ್ಯೋತಿ ಮತ್ತು ಅನ್ನಭಾಗ್ಯ (ನಾಲ್ಕು ಗ್ಯಾರಂಟಿ) ಯೋಜನೆಗಳ ಸಮೀಕ್ಷೆಯನ್ನು ಮಾಡಲು ಯಾರಿಗೆ ವಹಿಸಲಾಗಿತ್ತು; ಮತ್ತು ಆ ಪ್ರಾಧಿಕಾರ / ಕಂಪನಿಗೆ ಪಾವತಿ ಮಾಡಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)</td><td>ಕರ್ನಾಟಕ ಸರ್ಕಾರದಿಂದ ಅನುಷ್ಠಾನಗೊಳಿಸಲಾಗಿರುವ ಗೃಹ ಲಕ್ಷ್ಮೀ, ಶಕ್ತಿ ಯೋಜನೆ, ಗೃಹ ಜ್ಯೋತಿ ಮತ್ತು ಅನ್ನಭಾಗ್ಯ ಈ 4 ಖಾತರಿಗಳ ಕುರಿತು ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತೀ ಮಾಹೆ ಒಂದರಂತೆ ಸಮೀಕ್ಷೆಯನ್ನು ನಡೆಸಲು M/s M2M MEDIA NETWORK LLP, ಬೆಂಗಳೂರು ಇವರ ಸೇವೆಯನ್ನು ತಲಾ ರೂ.25.00 ಲಕ್ಷಗಳಂತೆ ಒಟ್ಟಾರೆ ರೂ.100.00 ಲಕ್ಷಗಳ ವೆಚ್ಚದಲ್ಲಿ ಸಂಗ್ರಹಣೆ ಮಾಡಿಕೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ ಕಲಂ 4(ಜಿ)ರಡಿ ಸಾರಿಗೆ ಇಲಾಖೆ, ಇಂಧನ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ವಿನಾಯಿತಿ ನೀಡಲಾಗಿದೆ. ಪ್ರತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br><br>ಈ ಬಗ್ಗೆ ಇದುವರೆಗೆ ಈ ಕೆಳಗಿನಂತೆ ವಿವಿಧ ಇಲಾಖೆಗಳಿಗೆ ಪಾವತಿ ಮಾಡಲಾಗಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><td>ಸಾರಿಗೆ ಇಲಾಖೆ</td><td>17.60</td></tr>
<tr><td>ಇಂಧನ ಇಲಾಖೆ</td><td>25.00</td></tr>
<tr><td>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ</td><td>20.00</td></tr>
<tr><td>ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ</td><td>25.00</td></tr>
<tr><td>ಒಟ್ಟು</td><td>87.60</td></tr>
</table>
</td></tr>
</table>

| | | |
|---|---|---|
| | | |
| ಆ | ಸಮೀಕ್ಷೆ ನಡೆಸಲು ರಾಜ್ಯದಲ್ಲಿರುವ ಸರ್ಕಾರಿ ಪ್ರಾಧಿಕಾರಗಳು ಯಾವುವು: ಅವುಗಳ ವಿವರ ನೀಡುವುದು; | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ.<br>ಸರ್ಕಾರದ ಆದೇಶ ಸಂಖ್ಯೆ: IFS 42 EVF (1) 99, ದಿನಾಂಕ: 17.11.2000.ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಇ | ನಾಲ್ಕು ಗ್ಯಾರಂಟಿ ಯೋಜನೆಗಳ ಸಮೀಕ್ಷೆ ನಡೆಸಲು ಸರ್ಕಾರದಿಂದ ಟೆಂಡರ್ ಕರೆಯಲಾಗಿತ್ತೇ; ಕರೆದಿದ್ದಲ್ಲಿ, ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ವಿವರ ನೀಡುವುದು; ಹಾಗೂ ಕರೆಯದಿದ್ದಲ್ಲಿ, ಕಾರಣಗಳನ್ನು ನೀಡುವುದು: | ಟೆಂಡರ್ ಕರೆದಿರುವುದಿಲ್ಲ.<br>ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಕಲಂ 4(ಜಿ)ರಡಿಯಲ್ಲಿ ನೇರವಾಗಿ ಸೇವೆಯನ್ನು ಪಡೆಯಲು ವಿನಾಯಿತಿ ನೀಡಲಾಗಿರುತ್ತದೆ. |
| ಈ | ಕೆಟಿಪಿಪಿ ನಿಯಮ 1999-2000ರನ್ವಯ 4(ಜಿ) ವಿನಾಯಿತಿಯನ್ನು ಯಾವ ಆಧಾರದ ಮೇಲೆ ನೀಡಲಾಗುತ್ತದೆ: ಮತ್ತು 4(ಜಿ) ವಿನಾಯಿತಿ ನೀಡುವಾಗ ಅನುಸರಿಸಬೇಕಾದ ಕ್ರಮಗಳ ಸಂಪೂರ್ಣ ಮಾಹಿತಿ ನೀಡುವುದು: | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ, ಕಲಂ 4(ಜಿ) ರ ಉಧೃತ ಭಾಗವನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ. |
| ಉ | ಗ್ಯಾರಂಟಿ ಯೋಜನೆಗಳ ಸಮೀಕ್ಷೆ ನಡೆಸಲು 4(ಜಿ) ವಿನಾಯಿತಿ ನೀಡಲಾಗಿತ್ತೇ: ನೀಡಿದ್ದಲ್ಲಿ, ಆಡಳಿತಾತ್ಮಕ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ನೀಡುವುದು? | ಹೌದು. ಕೆ.ಟಿ.ಪಿ.ಪಿ. ಕಾಯಿದೆ ಕಲಂ 4(ಜಿ)ರಡಿಯಲ್ಲಿ ನಿರ್ದಿಷ್ಟ ಸಂಗ್ರಹಣೆಗಳ ಸಂಬಂಧದಲ್ಲಿ ವಿನಾಯಿತಿ ನೀಡಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಸರ್ಕಾರದಿಂದ ವಿನಾಯಿತಿ ನೀಡಿ ಅಧಿಸೂಚಿಸಲಾಗಿರುತ್ತದೆ. |

ಕಡತ ಸಂ:ಆಇ 177 ವೆಚ್ಚ-12/2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಅನುಬಂಧ - 1

ಸಂಖ್ಯೆ:ಆಇ 645 ವೆಚ್ಚ-12/2023
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:13.09.2023

## ಅಧಿಸೂಚನೆ

ಕರ್ನಾಟಕ ಸರ್ಕಾರದಿಂದ ಅನುಷ್ಠಾನಗೊಳಿಸಲಾಗಿರುವ 4 ಖಾತರಿಗಳ ಕುರಿತು ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತೀ ಮಾಹೆ ಒಂದರಂತೆ 4 ಸಮೀಕ್ಷೆಗಳನ್ನು ನಡೆಸಲು M/s.M2M MEDIA NETWORK LLP, ಬೆಂಗಳೂರು, ಇವರ ಸೇವೆಯನ್ನು ತಲಾ ರೂ.25.00 ಲಕ್ಷಗಳಂತೆ ಒಟ್ಟಾರೆ ರೂ.100.00 ಲಕ್ಷಗಳ ವೆಚ್ಚದಲ್ಲಿ ಈ ಕೆಳಗಿನಂತೆ ಸಂಗ್ರಹಣೆ ಮಾಡಿಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಸಾರಿಗೆ, ಇಂಧನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಗಳಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

**ಷರತ್ತುಗಳು:**

(i) ಪ್ರಸ್ತಾಪಿತ ಸಮೀಕ್ಷೆಯ ವೆಚ್ಚವನ್ನು ಆಯಾ ಯೋಜನೆಗೆ ಒದಗಿಸಿದ ಅನುದಾನದಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ಭರಿಸತಕ್ಕದ್ದು.

(ii) ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಾರಿಗೆ, ಇಂಧನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಗಳು ದೃಢಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಕಾಂತಮ್ಮ ಎನ್.ಎಂ.
(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)
13/9

ಇವರಿಗೆ:

ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 25 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

(1) ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು.

(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ.

(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.

(4) ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ.

(5) ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ

(6) ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು-10 ಪ್ರತಿಗಳು.

(7) ಹೆಚ್ಚುವರಿ ಪ್ರತಿಗಳು.